# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ</u>

## ಸ್ಪೆಷಲ್ ಕೇಸ್(ಪಿ.ಸಿ.) ಸಂಖ್ಯೆ: 03/2020

ಪಿಡಬ್ಲ್ಯೂ: 03
ಸಿಡಬ್ಲ್ಯೂ: 02

<u>ದಿನಾಂಕ: **11-07-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

| | |
|---|---|
| ಸಾಕ್ಷಿದಾರರ ಹೆಸರು | : ಹುಸೇನ್ ಶರೀಫ್ |
| ತಂದೆಯ ಹೆಸರು | : ಅಬ್ದುಲ್ ಸತ್ತಾರ್ |
| ವಯಸ್ಸು | : 45 ವರ್ಷ |
| ಉದ್ಯೋಗ | : ಜ್ಯೂನಿಯರ್ ಅಸಿಸ್ಟೆಂಟ್, ಬೆಸ್ಕಾಂ |
| ವಾಸ ಸ್ಥಳ | : ಚಿತ್ರದುರ್ಗ |

<u>ಮುಖ್ಯ ವಿಚಾರಣೆ: ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದ:</u>

**2004** ನೇ ಇಸವಿಯಿಂದ ನಾನು ಜ್ಯೂನಿಯರ್ ಅಸಿಸ್ಟೆಂಟ್ ಎಂದು ಬೆಸ್ಕಾಂ ಚಿತ್ರದುರ್ಗದಲ್ಲಿ ಸೇವೆ ಸಲ್ಲಿಸುತ್ತಿದ್ದೇನೆ. ದಿನಾಂಕ **14–02–2019** ರಂದು ನಾನು ಕಛೇರಿಯಲ್ಲಿದ್ದಾಗ ನಮ್ಮ ಮೇಲಾಧಿಕಾರಿಗಳು ನನಗೆ ಎಸಿಬಿ ಕಛೇರಿಗೆ ಹೋಗುವಂತೆ ತಿಳಿಸಿದರು. ಅದರಂತೆ ನಾನು ಮದ್ಯಾಹ್ನ **4.10** ಕ್ಕೆ ಸದರಿ ಕಛೇರಿಗೆ ಹೋದೆ. ಅಲ್ಲಿ ನಾನು ಇನ್ಸ್ ಪೆಕ್ಟರ್ ಪ್ರಕಾಶ್ ಇವರನ್ನು ಬೇಟಿಯಾದೆ. ಅವರು ನನಗೆ ಅಲ್ಲಿ ಇದ್ದಂತಹ ಸಿಬ್ಬಂದಿಗಳನ್ನು ಪರಿಚಯ ಮಾಡಿಕೊಟ್ಟರು. ಅದೇ ರೀತಿ ಪಕ್ಕದಲ್ಲಿ ಕುಳಿತುಕೊಂಡಂತಹ ಭದ್ರಾ ಮೇಲ್ದಂಡೆ ಯೋಜನೆ ಕಛೇರಿಯ ಭೀಮಣ್ಣ (ಚಾಸಾ–**3**) ಇವರನ್ನು ಕೂಡಾ ಪರಿಚಯ ಮಾಡಿಕೊಟ್ಟರು. ನಂತರ ಅಲ್ಲಿಯೇ ಇದ್ದ ಚೌಧರಿ ಎಂಬುವವರನ್ನು ಕೂಡಾ ನನಗೆ ಪರಿಚಯ ಮಾಡಿಕೊಟ್ಟರು. ರೂ.**500/–** ಲಂಚಕ್ಕೆ ಸಂಬಂಧಿಸಿದಂತೆ ನಮಗೆ ದೂರು ನೀಡಲಾಗಿದೆ, ಆ ಕಾರಣ ನೀವು ಪಂಚರಾಗಿ ನಮಗೆ ಸಹಕರಿಸಬೇಕು ಎಂದು ಇನ್ಸ್ ಪೆಕ್ಟರ್ ರವರು ತಿಳಿಸಿದರು. ಆ ಕುರಿತು ಅವರು ಧ್ವನಿ ಮುದ್ರಣವನ್ನು ಕೂಡಾ ನಮಗೆ ಕೇಳಿಸಿದರು. ನಂತರ ಅದನ್ನು ಡಿವಿಡಿಗೆ ಡೌನ್ ಲೋಡ್ ಮಾಡಿ ಪೆನ್ ಡ್ರೈವ್‌ಗೂ ಕೂಡಾ ಹಾಕಿ ಡಿವಿಡಿ ಹಾಗೂ ಪೆನ್ ಡ್ರೈವ್ ಇವುಗಳನ್ನು ಪ್ರತ್ಯೇಕವಾಗಿ ಸೀಲು ಮಾಡಿದರು. ಅವುಗಳನ್ನು ನೋಡಿದರೆ ನಾನು ಗುರುತಿಸಬಲ್ಲೆ. ನಾನು ಪುನಃ ಹೇಳುತ್ತೇನ, ಧ್ವನಿ ಮುದ್ರಣವು ವಾಯ್ಸ್ ರೆಕಾರ್ಡರಿನ ಮೆಮೋರಿ ಕಾರ್ಡಿನಲ್ಲಿ ಇತ್ತು.

ಈಗ ವಿರಾಮದ ವೇಳೆಯಾದ್ದರಿಂದ **2** ನೇ ವೇಳೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.

**ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದಃ**

**2.** ಸದರಿ ಮೆಮೋರಿ ಕಾರ್ಡ್ ಹಾಗೂ ಡಿವಿಡಿ ಇವುಗಳನ್ನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ಮುದ್ದೆ ಮಾಲು **1** ಮತ್ತು **2** ಎಂದು ಗುರುತಿಸಲಾಗಿದೆ. ಆ ಡಿವಿಡಿ ಸಂಭಾಷಣೆಯನ್ನು ಲೇಖಿ ಪ್ರತಿ ಮಾಡಿ ಅದಕ್ಕೆ ನನ್ನ ಸಹಿ ಪಡೆದರು. ನಂತರ ಪೊಲೀಸರು ಸೋಡಿಯಂ ಹಾಗೂ ಫಿನಾಪ್ತಲಿನ್ ಪೌಡರ್ ಇರುವಂತಹ ಎರಡು ಬಾಟಲ್ ಗಳನ್ನು ತೋರಿಸಿದರು. ತದ ನಂತರ ಅವರು ಫಿನಾಪ್ತಲಿನ್ ಪೌಡರ್ ನ್ನು ಒಂದು ಪೇಪರ್ ಮೇಲೆ ಹಾಕಿದರು. ನಂತರ ಚೌಧರಿಯವರು ತೆಗೆದುಕೊಂಡು ಬಂದಂತಹ ರೂ.**500** ನೋಟಿಗೆ ಫಿನಾಪ್ತಲಿನ್ ಪೌಡರ್ ನ್ನು ಆ ನೋಟಿನ ಎರಡೂ ಬದಿಗೆ ಮಾರುತಿರಾಂ ಎನ್ನುವ ಪೊಲೀಸರು ಹಚ್ಚಿದರು ಆ ಪೌಡರನ್ನು ಹಚ್ಚುವ ಮೊದಲೇ ನಾನು ಆ ನೋಟನ್ನು ನೋಡಿದ್ದೆ ಮತ್ತು ಅದರಲ್ಲಿದ್ದ ಸಿರಿಯಲ್ ನಂಬರನ್ನು ಭೀಮಣ್ಣನವರಿಗೆ ಹೇಳಿದ್ದೆ. ಆ ನೋಟಿನ ನಂಬರನ್ನು ಬರೆದಂತಹ ಬಿಳಿ ಕಾಗದಕ್ಕೆ ನಾನು ಮತ್ತು ಭೀಮಣ್ಣ ಸಹಿ ಮಾಡಿದೆವು. ಈಗ ಆ ಪೇಪರನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದ್ದು ನಿಪಿ-**25** ಎಂದು ನನ್ನ ಸಹಿಯನ್ನು ನಿಪಿ-**25(**ಎ**)** ಎಂದು ಗುರುತಿಸಲಾಯಿತು. ಆ ಐದುನೂರು ರೂಪಾಯಿ ನೋಟನ್ನು ನೋಡಿದರೆ ಗುರುತಿಸಬಲ್ಲೆ. ಆ ನೋಟನ್ನು ನೋಡುತ್ತಿದ್ದು ಅದನ್ನು ಮುದ್ದೆ ಮಾಲು **10** ಎಂದು ಈಗಾಗಲೇ ಗುರುತಿಸಲಾಗಿದೆ. ಪೇಪರಿನಲ್ಲಿ ಇದ್ದಂತಹ ಫಿನಾಪ್ತಲಿನ್ ಪೌಡರ್ ನ್ನು ಪೊಲೀಸರು ಒಂದು ಕವರಿನಲ್ಲಿ ಹಾಕಿ ಸೀಲು ಮಾಡಿದರು. ಆ ಪೌಡರಿನ ಚೀಟಿ ನೋಡುತ್ತಿದ್ದು ಅದನ್ನು ಈಗಾಗಲೇ ಮುದ್ದೆ ಮಾಲು 3 ಎಂದು ಗುರುತಿಸಲಾಗಿದೆ.

**3.** ನಂತರ ಸೋಡಿಯ ಕಾರ್ಬೋನೇಟ್‌ನ್ನು ಒಂದು ಬಟ್ಟಲಿನಲ್ಲಿ ತೆಗೆದುಕೊಂಡು ದ್ರಾವಣವನ್ನು ತಯಾರಿಸಿದರು. ನಂತರ ಆ ದ್ರಾವಣವನ್ನು ಒಂದು ಬಾಲಟಲಿನಲ್ಲಿ ಹಾಕಿದರು. ಆ ಬಾಟಲನ್ನು ನೋಡುತ್ತಿದ್ದು ಅದರ ಮೇಲೆ ನನ್ನ ಸಹಿ ಇದ್ದು ಅದನ್ನು ಈಗಾಗಲೇ ಮುದ್ದೆ ಮಾಲು **4** ಎಂದು ಗುರುತಿಸಲಾಗಿದೆ. ತದ ನಂತರ ಚೌಧರಿಯವರ ಜೇಬನ್ನು ಪರಿಶೀಲನೆ ಮಾಡಿ ಅದರಲ್ಲಿ ಏನೂ ಇಲ್ಲವೆಂದು ಖಚಿತಪಡಿಸಿಕೊಂಡ ನಂತರ ಆ ಐದುನೂರು ರೂಪಾಯಿ ನೋಟನ್ನು ನಾನು ಚೌಧರಿಯವರ ಜೇಬಿನಲ್ಲಿ ಇಟ್ಟೆ. ಆ ನಂತರ ನನ್ನ ಕೈಗಳನ್ನು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ತೊಳೆಸಿದರು ಅದರಿಂದಾಗಿ ಆ ದ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು. ಆ ದ್ರಾವಣವನ್ನು ಕೂಡಾ ಒಂದು ಬಾಟಲಿನಲ್ಲಿ ಹಾಕಿ ಸೀಲು ಮಾಡಿದರು. ಅದನ್ನು ನೋಡುತ್ತಿದ್ದು ಅದನ್ನು ಮುದ್ದೆ ಮಾಲು **5** ಎಂದು ಈಗಾಗಲೇ ಗುರುತಿಸಲಾಗಿದೆ. ಪಿರ್ಯಾದಿಗೆ ನಾವು ವಾಯ್ಸ್ ರೆಕಾರ್ಡರ್ ಕೊಡುತ್ತೇವೆ ಅದನ್ನು ನೀವು ಚಾಲೂ ಮಾಡಿ ಇಟ್ಟುಕೊಳ್ಳಬೇಕು ಎಂದು ಆತನಿಗೆ ಹೇಳಿದೆವು ಮತ್ತು ನನಗೆ ನಾನು ಚೌಧರಿ ಕಡೆಗೆ ಗಮನಕೊಟ್ಟು ಅವರುಗಳು ಏನು ಮಾತನಾಡುತ್ತಾರೆ ಎಂಬುದನ್ನು ತಿಳಿದುಕೊಂಡು ಹೇಳಬೇಕು ಎಂದು ತಿಳಿಸಿದರು. ಆ ದಿನ ನಮ್ಮ ಪೊಟೋಗಳನ್ನು ಕೂಡಾ ತೆಗೆಯಲಾಯಿತು. ಆ ದಿನ ತೆಗೆಯಲಾದಂತಹ ಪೊಟೋಗಳನ್ನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಪಿ**–6** ರಿಂದ **12** ಎಂದು ಗುರುತಿಸಲಾಗಿದೆ. ಆ ಪೊಟೋಗಳಲ್ಲಿ ನಾನು, ಭೀಮಣ್ಣ, ಚೌಧರಿ ಮತ್ತು ಮಾರುತಿರಾಮ್ ಇದ್ದೇವೆ. ಆ ಕುರಿತು ಬರವಣಿಗೆ ಮಾಡಲಾಯಿತು. ಅದನ್ನು

ನೋಡುತ್ತಿದ್ದು ಅದರ ಪ್ರತೀ ಪುಟದಲ್ಲು ನಾನು ಸಹಿ ಮಾಡಿದ್ದು ಅದನ್ನು ನಿಪಿ–**2** ಎಂದು ಈಗಾಗಲೇ ಗುರುತಿಸಲಾಗಿದ್ದು ನನ್ನ ಸಹಿಯನ್ನು ನಿಪಿ–**2**(ಎ) ಎಂದು ಗುರುತಿಸಲಾಯಿತು. ಈ ಎಲ್ಲಾ ಪ್ರಕ್ರಿಯೆ ಮುಗಿಯಲು **5.10** ಆಯಿತು. ಸುಮಾರು **5.20** ಕ್ಕೆ ನಾವು ಒಂದು ಜೀಪು ಹಾಗೂ ಒಂದು ಮೋಟಾರ್ ಸೈಕಲ್ ಮೇಲೆ ಚಳ್ಳಕೆರೆಗೆ **6.20** ಕ್ಕೆ ಹೋದೆವು. ಅಲ್ಲಿ ಕೃಷ್ಣರಾಜೇಂದ್ರ ಲೈಬ್ರರಿ ಹತ್ತಿರ ವಾಹನಗಳನ್ನು ನಿಲ್ಲಿಸಿದೆವು.

**4.** ಅಲ್ಲಿಂದ ನಾನು ಮತ್ತು ಚೌಧರಿಯವರು ಭೂ ಕಂದಾಯ ಇಲಾಖೆ ಕಡೆಗೆ ಹೋದೆವು. ಅಲ್ಲಿ ಆರೋಪಿ ಇರಲಿಲ್ಲ. ಆಗ ಚೌಧರಿಯವರು ಆರೋಪಿತನಿಗೆ ಫೋನ್ ಮಾಡಿದರು. ಅಷ್ಟರಲ್ಲಿ ನಾನು ಇಲ್ಲೇ ಇದ್ದೇನೆ ಎಂದು ಹೇಳುತ್ತಾ ಆರೋಪಿ ಅಲ್ಲಿಗೆ ಬಂದ. ಚೌಧರಿಯವರು ಆಯಿತಾ ಆಯಿತಾ ಎಂದು ಆರೋಪಿತನಿಗೆ ಕೇಳಿದರು. ಆಗ ಆರೋಪಿ ಕೊಡಿ ಕೊಡಿ ಎಂದು ಹೇಳಿದ. ಕೂಡಲೇ ಚೌಧರಿ ಜೇಬಿನಿಂದ ರೂ.**500/–** ತೆಗೆದು ಆರೋಪಿ ಕೈಗೆ ಕೊಟ್ಟರು**,** ಆತ ತನ್ನ ಶರ್ಟಿನ ಜೇಬಿನಲ್ಲಿ ಇಟ್ಟುಕೊಂಡ. ಮುಂದೆ ಆರೋಪಿ ತನ್ನ ಚೆಂಬರಿನಲ್ಲಿ ಹೋಗಿ ಕುಳಿತುಕೊಂಡ. ಆಗ ಚೌಧರಿಯವರು ಹೊರಗಡೆ ಬಂದು ತಮ್ಮ ತಲೆ ಸವರಿಕೊಂಡು ಸನ್ನೆ ಮಾಡಿದರು. ಅಲ್ಲಿದ್ದಂತಹ ಪೊಲೀಸ್ ಸಿಬ್ಬಂದಿ ಪ್ರಕಶ್ ಇನ್ಸ್ ಪೆಕ್ಟರ್ ಸದರಿ ಚೌಧರಿಯೇ ಪೊಲೀಸರಿಗೆ ಆರೋಪಿತನನ್ನು ತೋರಿಸಿದರು ಮತ್ತು ಆತನೇ ಆರೋಪಿತನ್ನು ತೋರಿಸಿ ಅವನ ಹೆಸರನ್ನು ಹೇಳಿ ಆಕಾರ್ ಬಂದ್ ಗೆ ದುಡ್ಡು ಇಸಿದುಕೊಂಡಿದ್ದಾರೆ ಎಂದು ತಿಳಿಸಿದರು. ಆಗ ಪ್ರಕಾಶ್ ರವರು ತಾವು ಎಸಿಬಿಯಿಂದ ಬಂದಿದ್ದಾಗಿ ಹೇಳಿದ ಕೂಡಲೇ ಆರೋಪಿ ರೂ.**500/–** ನೋಟನ್ನು ಕಿಟಕಿಯಿಂದ ಬಿಸಾಕಲು ಹೋದ. ಕೂಡಲೇ ಪೊಲೀಸರು ಆರೋಪಿತನ ಎರಡೂ ಕೈಗಳನ್ನು ಹಿಡಿದು ಅವರ ಜೊತೆ ಸಹಕರಿಸಬೇಕೆಂದು ಆತನಿಗೆ ತಿಳಿಸಿದರು. ನಂತರ ನನ್ನನ್ನು ಹಾಗೂ ಭೀಮಣ್ಣ ಇವರನ್ನು ಆರೋಪಿತನಿಗೆ ಪರಿಚಯ ಮಾಡಿಸಿದರು. ತದ ನಂತರ ಪೊಲೀಸರು ಅಲ್ಲಿ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿದರು. ಆ ದ್ರಾವಣದಲ್ಲಿ ಆರೋಪಿತನ ಕೈಗಳನ್ನು ತೊಳೆಸಿದಾಗ ಆರೋಪಿತನ ಕೈಗಳು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿದವು. ಐದುನೂರು ರೂಪಾಯಿ ಎಲ್ಲಿ ಎಂದು ಕೇಳಿದಾಗ ತನ್ನ ಶರ್ಟಿನ ಜೇಬಿನಲ್ಲಿದ್ದ ನೋಟನ್ನು ಆರೋಪಿ ತೆಗೆದು ಟೇಬಲ್ ಮೇಲೆ ಇಟ್ಟ. ಆ ದಿನ ಸದರಿ ಕಛೇರಿಯಲ್ಲಿ ತಯಾರಿಸಲಾದಂತಹ ದ್ರಾವಣವನ್ನು ನೋಡುತ್ತಿದ್ದು ಅದನ್ನು ಮುದ್ದೆ ಮಾಲು **6** ಎಂದು ಈಗಾಗಲೇ ಗುರುತಿಸಿದೆ. ಆ ನೋಟಿನ ಮೇಲೆ ಇದ್ದಂತಹ ನಂಬರ್ ಗಳನುನ ನಾವು ಮೊದಲೇ ಬರೆದಂತಹ ಹಾಳೆಯ ಮೇಲಿನ ನಂಬರ್ ಗಳೊಂದಿಗೆ ತಾಳೆ ಮಾಡಿ ನೋಡಿದೆವು. ಆಗ ಅವು ಒಂದೆ ನಂಬರ್ ಬಂದಿದ್ದವು. ಆ ರೂ.**500** ನೋಟನ್ನು ಒಂದು ಲಕೋಟೆಯಲ್ಲಿ ಹಾಕಿ ಸೀಲು ಮಾಡಲಾಯಿತು. ಹೋಲಿಕೆಯಾದ ನಂತರ ನಿಪಿ–**25** ರ ಮೇಲೆ ಆ ಕುರಿತು ಒಂದು ಷರಾ ಹಾಕಲಾಯಿತು. ಆ ಷರಾಗೆ ನಾನು ಹಾಗೂ ಭೀಮಣ್ಣ ಇಬ್ಬರೂ ಸಹಿಗಳನ್ನು ಮಾಡಿದ್ದೇವೆ.

**5.** ಆರೋಪಿತನಿಗೆ ಇನ್ನೊಂದು ಶರ್ಟನ್ನು ಒದಗಿಸಿ ಆತ ತೊಟ್ಟಿದ್ದ ಶರ್ಟನ್ನು ಪಡೆದುಕೊಂಡು ಆ

ಶರ್ಟಿನ ಜೇಬನ್ನು ಉಲ್ಟಾ ಮಾಡಿ ದ್ರಾವಣದಲ್ಲಿ ತೊಳೆದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ಬಂತು. ಆ ದ್ರಾವಣವನ್ನು ಕೂಡಾ ಒಂದು ಬಾಟಲಿನಲ್ಲಿ ಹಾಕಿ ಸೀಲು ಮಾಡಲಾಯಿತು ಮತ್ತು ಶರ್ಟನ್ನು ಕೂಡಾ ಒಂದು ಕವರಿನಲ್ಲಿ ಹಾಕಿ ಸೀಲು ಮಾಡಿದರು. ಆ ಬಾಟಲ್ ನೋಡುತ್ತಿದ್ದು ಅದನ್ನು ಈಗಾಗಲೇ ಮುದ್ದೆ ಮಾಲು **7** ಎಂದು ಗುರುತಿಸಿದೆ. ಆ ದಿನ ಆರೋಪಿ ತೊಟ್ಟಿದ್ದ ಶರ್ಟನ್ನು ನೋಡುತ್ತಿದ್ದು ಅದರ ಪ್ಯಾಕೇಟಿನ ಮೇಲೆ ನನ್ನ ಸಹಿ ಇರುತ್ತದೆ. ಆ ರೂ.**500** ನ್ನು ಏಕೆ ಪಡೆದುಕೊಂಡಿದ್ದಿರಿ ಎಂದು ಆರೋಪಿತನನ್ನು ಪೊಲೀಸರು ವಿಚಾರಿಸಿದಾಗ ಆತ ಚೌಧರಿಯವರು ಬಸ್ ಚಾರ್ಜಿಗೆ ಮತ್ತು ಖರ್ಚಿಗೆ ದುಡ್ಡು ಇರಲಿಲ್ಲವೆಂದು ಹೇಳಿ ಇಸಿದುಕೊಂಡಿದ್ದರು ಹಾಗೂ ಅದನ್ನು ವಾಪಸ್ ಮಾಡಿದ್ದಾರೆ ಎಂದು ಲಿಖಿತವಾಗಿ ತಿಳಿಸಿದ. ಆ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ–**26** ಎಂದು ನನ್ನ ಸಹಿಯನ್ನು ನಿಪಿ–**26**(ಎ) ಎಂದು ಗುರುತಿಸಲಾಯಿತು. ಆಗ ಚೌಧರಿಯವರು ತಾವು ಆರೋಪಿತನಿಂದ ಯಾವುದೇ ದುಡ್ಡನ್ನು ಇಸಿದುಕೊಂಡಿಲ್ಲ ಎಂದು ತಿಳಿಸಿದರು.

**6.** ನಂತರ ವಾಯ್ಸ್ ರೆಕಾರ್ಡರನ್ನು ಹಾಕಿ ಪೊಲೀಸರು ಕೇಳಿಸಿದರು. ಆಗ ಆರೋಪಿತನ ಮೇಲಧಿಕಾರಿಗಳಾದ ಕೃಷ್ಣೇಗೌಡ ಇವರು ಆರೋಪಿತನ ಧ್ವನಿಯನ್ನು ಗುರುತಿಸಿದರು. ಆ ಕುರಿತು ಕೂಡಾ ಒಂದು ಲೇಖಿ ಪ್ರತಿ ಮಾಡಲಾಯಿತು. ಅದಕ್ಕೆ ನಾನು ಮತ್ತು ಭೀಮಣ್ಣ ಇಬ್ಬರೂ ಸಹಿ ಮಾಡಿದ್ದೇವೆ, ಆ ಲೇಖಿ ಪ್ರತಿಯನ್ನು ನೋಡುತ್ತಿದ್ದು ಅದನ್ನು ನಿಪಿ–**13** ಎಂದು ಈಗಾಗಲೇ ಗುರುತಿಸಿದೆ. ಅದರಲ್ಲಿರುವ ನನ್ನ ಸಹಿ ನೋಡುತ್ತಿದ್ದು ಅದನ್ನು ನಿಪಿ–**13**(ಎ) ಎಂದು ಗುರುತಿಸಲಾಯಿತು. ನಂತರ ಆ ವಾಯ್ಸ್ ರೆಕಾರ್ಡರನ್ನು ಡೌನ್ ಲೋಡ್ ಮಾಡಿ ಒಂದು ಡಿವಿಡಿಗೆ ಹಾಕಿದರು. ಆ ಡಿವಿಡಿಯನ್ನು ನೋಡುತ್ತಿದ್ದು ಅದನ್ನು ಸೀಲು ಮಾಡಲಾದ ಕವರಿನ ಮೇಲೆ ನನ್ನ ಸಹಿ ಇದ್ದು ಸದರಿ ಡಿವಿಡಿಯನ್ನು ಈಗಾಗಲೇ ಮುದ್ದೆ ಮಾಲು **14** ಎಂದು ಗುರುತಿಸಿದೆ. ಈ ಎಲ್ಲಾ ಪ್ರಕ್ರಿಯೆ ಮುಗಿಯುವವರೆಗೆ ರಾತ್ರಿ **10.45** ಆಯಿತು.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.

**ದಿನಾಂಕಃ 11-07-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದಃ**

7. ನಂತರ ಎಸಿಬಿ ಪೊಲೀಸರು ವಿದ್ಯಾಧರ್ ಇವರ ಬಳಿ ಇದ್ದ ಚೌಧರಿಯವರಿಗೆ ಸಂಬಂಧಿಸಿದ ಕಡತವನ್ನು ತರಿಸಿದರು. ಆ ಕಡತದಲ್ಲಿರುವ ಕಾಲದಪತ್ರಗಳ ಒಂದು ಪೊಟೋ ಕಾಪಿಗಳನ್ನು ತೆಗೆದುಕೊಂಡು ಆ ಕಾಪಿಗಳಿಗೆ ನನ್ನ ಹಾಗೂ ಭೀಮಣ್ಣ ಇವರ ಸಹಿಗಳನ್ನು ಪಡೆದರು. ಈಗ ನನಗೆ ತೋರಿಸಲಾದ ನಿಪಿ–**14** ರ **209** ರಿಂದ **215** ಪುಟ ಸಂಖ್ಯೆಗಳ ಮೇಲೆ ಪ್ರತೀ ಪುಟದಲ್ಲೂ ನಾನು ಸಹಿ ಮಾಡಿದ್ದೇನೆ. ನನ್ನ ಹಾಗೇ ಭೀಮಣ್ಣ ಕೂಡಾ ಪ್ರತೀ ಪುಟದಲ್ಲಿ ಸಹಿ ಮಾಡಿದ್ದಾರೆ. ಆ ಪೈಕಿ ನಿಪಿ–**14** ರ ಪುಟ ಸಂ.**209** ರಲ್ಲಿ ನನ್ನ ಸಹಿಯನ್ನು ನೋಡುತ್ತಿದ್ದು ಅದನ್ನು ನಿಪಿ–**14**(ಹೆಚ್) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಸದರಿ ಪೊಲೀಸರು ಪೊಟೋ ತೆಗೆದು ಮಹಜರ್ ಮಾಡಿದರು. ಈಗ ನಾನು ನೋಡುತ್ತಿರುವಂತಹ ನಿಪಿ–**15** ರಿಂದ **21** ಪೊಟೋಗಳಲ್ಲಿ ನಾನು ಕೂಡಾ ಇದ್ದೇನೆ. ಈಗ ನನಗೆ ತೋರಿಸಲಾದ ನಿಪಿ–**4** ರ ಮೇಲೆ ಪ್ರತೀ ಪುಟದಲ್ಲೂ ನಾನು ಸಹಿಯನ್ನು ಮಾಡಿದುದ ಕೊನೆ ಪುಟದಲ್ಲಿರುವಂತಹ ನನ್ನ ಸಹಿಯನ್ನು ನಿಪಿ–**4**(ಬಿ) ಎಂದು ಗುರುತಿಸಲಾಯಿತು. ಭೀಮಣ್ಣ ಕೂಡಾ ಅದಕ್ಕೆ ಸಹಿ ಮಾಡಿದ್ದಾರೆ.

**8**. ನಂತರ ಆರೋಪಿತನನ್ನು ಕರೆದುಕೊಂಡು ಚಿತ್ರದುರ್ಗಕ್ಕೆ ನಾವುಗಳೆಲ್ಲಾ ಬಂದೆವು. ಆರೋಪಿತನನ್ನು ಈ ದಿನ ನ್ಯಾಯಾಲಯದಲ್ಲಿ ನೋಡುತ್ತಿದ್ದು ಗುರುತಿಸುತ್ತೇನೆ. ನಾವು ಠಾಣೆಗೆ ಬಂದಾಗ ಆಗಲೇ ಸಾಕಷ್ಟು ವೇಳೆಯಾಗಿದ್ದರಿಂದ ಮಾರನೇ ದಿನ ಬೆಳಗ್ಗೆ **10.00** ಗಂಟೆಗೆ ಎಸಿಬಿ ಕಛೇರಿಗೆ ಬರುವಂತೆ ಪೊಲೀಸರು ತಿಳಿಸಿದರು. ಅದರಂತೆ ದಿನಾಂಕ **15–02–2019** ರಂದು ನಾನು ಎಸಿಬಿ ಕಛೇರಿಗೆ ಹೋದೆ ಅಲ್ಲಿ ಭೀಮಣ್ಣ ಹಾಗೂ ಚೌಧರಿ ಇದ್ದರು. ಆಗ ಪೊಲೀಸರು ನಾವು ಧ್ವನಿ ಮಹಜರಿಗೆ ಸಹಕರಿಸಬೇಕೆಂದು ತಿಳಿಸಿದರು. ಅವರು ಚೌಧರಿಯವರ ಧ್ವನಿ ಮುದ್ರಣದ ಲೇಖಿ ಪ್ರತಿಯನ್ನು ಮಾಡಿ ನನಗೊಂದು ಪ್ರತಿ**,** ಭೀಮಣ್ಣನಿಗೊಂದ ಪ್ರತಿ ಹಾಗೂ ಚೌಧರಿಯವರಿಗೊಂದು ಪ್ರತಿ ಕೊಟ್ಟರು. ನಾನು ಆ ಲೇಖಿ ಪ್ರತಿಯನ್ನು ನೋಡುತ್ತಿದ್ದು ಅದನ್ನು ನಿಪಿ–**22** ಎಂದು ಈಗಾಗಲೇ ಗುರುತಿಸಲಾದ್ದು ಅದರಲ್ಲಿರುವ ನನ್ನ ಸಹಿಯನ್ನು ನಿಪಿ–**22**(ಎ) ಎಂದು ಗುರುತಿಸಲಾಯಿತು. ಭೀಮಣ್ಣ ಕೂಡಾ ಅದಕ್ಕೆ ಸಹಿ ಮಾಡಿದ್ದಾರೆ. ಆ ಲೇಖಿ ಪ್ರತಿಯನ್ನು ಚೌಧರಿಯವರು ಎರಡು ಸಾರಿ ಓದಿದರು ನಾನು ಮತ್ತು ಭೀಮಣ್ಣ ಅದನ್ನು ಕೇಳಿಸಿಕೊಂಡೆವು. ಅವರು ಓದಿದ್ದನ್ನು ಡಿವಿಡಿಯಲ್ಲಿ ಅವರು ಡೌನ್ ಲೋಡ್ ಮಾಡಿಕೊಂಡರು. ಆ ಡಿವಿಡಿಯನ್ನು ಒಂದು ಲಕೋಟೆಯಲ್ಲಿ ಹಾಕಿ ಸೀಲು ಮಾಡಿದರು. ಆ ಡಿವಿಡಿಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ಮುದ್ದೆ ಮಾಲು **9** ಎಂದು ಗುರುತಿಸಲಾಗಿದ್ದು ಸದರಿ ಮುದ್ದೆ ಮಾಲು **9** ನ್ನು ಇಡಲಾದ ಲಕೋಟೆ ಮೇಲೆ ಲಗತ್ತಿಸಲಾದ ಚೀಟಿಗೆ ನನ್ನ ಸಹಿ ಇದೆ. ಸದರಿ ಸಹಿಯನ್ನು ಮುದ್ದೆ ಮಾಲು **9**(ಎ) ಎಂದು ಗುರುತಿಸಲಾಯಿತು. ನಂತರ ಪೊಟೋ ತೆಗೆದು ಮಹಜರ್ ಕ್ರಮ ಜರುಗಿಸಿದರು. ಸದರಿ ಪೊಟೋಗಳನ್ನು

ನೋಡುತ್ತಿದ್ದು ಅವುಗಳನ್ನು ನಿಪಿ–**23** ಹಾಗೂ **24** ಎಂದು ಈಗಾಗಲೇ ಗುರುತಿಸಲಾಗಿದೆ. ಈಗ ನನಗೆ ತೋರಿಸಲಾದ ನಿಪಿ–**5** ರ ಮೇಲೆ ನನ್ನ ಸಹಿ ಇದ್ದು ಅದನ್ನು ನಿಪಿ–**5**(ಬಿ) ಎಂದು ಗುರುತಿಸಲಾಯಿತು. ಅದಕ್ಕೆ ಭೀಮಣ್ಣ ಕೂಡಾ ಸಹಿ ಮಾಡಿದ್ದಾರೆ.

**9**. ದಿನಾಂಕ **20–03–2019** ರಂದು ಎಸಿಬಿ ಪೊಲೀಸರು ನನ್ನನ್ನು ಕರೆಸಿದ್ದರು. ಅಲ್ಲಿ ವಿದ್ಯಾಧರ್ ಹಾಗೂ ಭೀಮಣ್ಣ ಇದದರು. ಆರೋಪಿತನ ಧ್ವನಿ ಮುದ್ರಿಕೆಯನ್ನು ಎಫ್.ಎಸ್.ಎಲ್.ಗೆ ಕಳುಹಿಸಬೇಕಾಗಿದೆ ಎಂದು ಹೇಳಿ ನಮಗೆ ಸಹಕರಿಸಲು ಹೇಳಿದರು. ಆಗ ಪೊಲೀಸರು ಆರೋಪಿತನ ಧ್ವನಿ ಮುದ್ರಿಕೆಯ ಲೇಖಿ ಪ್ರತಿಯನ್ನು ಮಾಡಿದರು. ಆ ಲೇಖಿ ಪ್ರತಿ ನೋಡುತ್ತಿದ್ದು ಅದನ್ನು ನಿಪಿ–**27** ಎಂದು ನನ್ನ ಸಹಿಯನ್ನು ನಿಪಿ–**27**(ಎ) ಎಂದು ಗುರುತಿಸಲಾಯಿತು. ಆ ಲೇಖಿ ಪ್ರತಿಯ ಮೂರು ಪ್ರತಿಗಳನ್ನು ತಯಾರಿಸಿ ನನಗೊಂದು ಪ್ರತಿ, ಭೀಮಣ್ಣನಿಗೊಂದು ಪ್ರತಿ ಹಾಗೂ ಆರೋಪಿತನಿಗೊಂದು ಪ್ರತಿ ನೀಡಿದರು. ಆ ಲೇಖಿ ಪ್ರತಿಯನ್ನು ಆರೋಪಿ ಎರಡು ಸಾರಿ ಓದಿದರು ಅದನ್ನು ನಾವು ಗಮನವಿಟ್ಟು ಕೇಳಿದೆವು. ಅವರು ಓದಿರುವುದನ್ನು ಧ್ವನಿಮುದ್ರಿಸಿಕೊಂಡು ಒಂದು ಡಿವಿಡಿಯಲ್ಲಿ ಹಾಕಿ ಒಂದು ಲಕೋಟೆಯಲ್ಲಿ ಇಟ್ಟು ಸೀಲು ಮಾಡಿದರು. ಅಲ್ಲದೇ ಪಂಚನಾಮೆ ಕಾಲಕ್ಕೆ ನಾವು ಇದ್ದ ಬಗ್ಗೆ ಪೊಟೋ ತೆಗೆದರು. ಅ ಡಿವಿಡಿ ನೋಡಿದೆ ಗುರುತಿಸಬಲ್ಲೆ. ಈಗ ಆ ಪೊಟೋಗಳನ್ನು ನೋಡುತ್ತಿದ್ದು ಸದರಿ ಪೊಟೋಗಳನ್ನು ನಿಪಿ–**28** ಹಾಗೂ **29** ಎಂದು ಗುರುತಿಸಲಾಯಿತು. ಆಗ ತಯಾರಿಸಲಾದಂತಹ ಮಹಜರ್ ನೋಡುತ್ತಿದ್ದು ಅದನ್ನು ನಿಪಿ–**30** ಎಂದು ನನ್ನ ಸಹಿಯನ್ನು ನಿಪಿ–**30**(ಎ) ಎಂದು ಗುರುತಿಸಲಾಯಿತು. ಆ ಎಲ್ಲಾ ವಸ್ತುಗಳ ಮೇಲೆ ಎಫ್ ಎಂಬ ಸೀಲನ್ನು ಹಾಕಲಾಯಿತು. ಆ ಸೀಲನ್ನು ಸದರಿ ಭೀಮಣ್ಣನ ಕೈಗೆ ಕೊಟ್ಟರು.

( ಸದರಿ ಭೀಮಣ್ಣ – ಚಾಸಾ–**3** ಈ ದಿನ ನ್ಯಾಯಾಲಯದಲ್ಲಿ ಹಾಜರಿದ್ದು ಅವರು ಆ ಸೀಲನ್ನು ತಂದಿರುತ್ತಾರೆ ಎಂದು ಮತ್ತು ಅದನ್ನು ಈ ಸಾಕ್ಷಿದಾರರಿಗೆ ತೋರಿಸಲು ಅಭಿಯೋಜಕರು ಅನುಮತಿ ಕೋರಿದ್ದು ಆರೋಪಿ ಪರ ವಕೀಲರಾದ ಶ್ರೀ ಜೆಎಸ್‌ಎಸ್ ಇವರ ಸಮಕ್ಷಮದಲ್ಲಿ ಚಾಸಾ–**3** ಅದನ್ನು ಹಾಜರುಪಡಿಸಿರುತ್ತಾರೆ).

ಸದರಿ ಸೀಲನ್ನು ನೋಡುತ್ತಿದ್ದು ಅದನ್ನು ಮುದ್ದೆ ಮಾಲು **15** ಎಂದು ಗುರುತಿಸಲಾಯಿತು. ಆರೋಪಿತನ ಧ್ವನಿ ಮುದ್ರಣ ಮಾಡಿಕೊಂಡ ಡಿವಿಡಿಯನ್ನು ನೋಡುತ್ತಿದ್ದು ಅದನ್ನು ಸೀಲಾದ ಕವರಿನಲ್ಲಿ ಇಡಲಾಗಿದೆ.

(ವಿಶೇಷ ಅಭಿಯೋಜಕರ ಕೋರಿಕೆಯ ಮೇರೆಗೆ ಸದರಿ ಕವರನ್ನು ಜೆಎಸ್‌ಎಸ್ ವಕೀಲರ ಸಮಕ್ಷಮ ತೆರೆಯಲಾಯಿತು.)

ಸದರಿ ಡಿವಿಡಿಯನ್ನು ನಿಪಿ–**31** ಎಂದು ಗುರುತಿಸಲಾಯಿತು. ಅದರ ಲಕೋಟೆ ಮೇಲೆ ನಮ್ಮ ಸಹಿವುಳ್ಳ ಚೀಟಿಯನ್ನು ಅಂಟಿಸಲಾಗಿದ್ದು, ನನ್ನ ಸಹಿಯನ್ನು ನಿಪಿ–**31**(ಎ) ಎಂದು ಗುರುತಿಸಲಾಯಿತು. ಈ ಕುರಿತು ತನಿಖಾಧಿಕಾರಿ ನನ್ನ ಹೇಳಿಕೆಯನ್ನು ಮಾಡಿಕೊಂಡಿದ್ದಾರೆ.

<u>ದಿನಾಂಕಃ **10-09-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲು: ಶ್ರೀ ಎಂ.ಸಿ.ಟಿ. ವಕೀಲರಿಂದ ಆರೋಪಿತನ ಪರವಾಗಿಃ</u>**

**10**. ನಮ್ಮ ಬೆಸ್ಕಾಂ ಕಛೇರಿಯಿಂದ ಎಸಿಬಿ ಕಛೇರಿ ಸುಮಾರು **1** ಕಿಮೀ ಅಂತರದಲ್ಲಿದೆ. ಆ ಕಛೇರಿಗೆ ಹೋಗುವ ಮೊದಲು ನಮ್ಮ ಮೇಲಾಧಿಕಾರಿಗಳು ನನಗೆ ಲಿಖಿತವಾಗಿ ಆದೇಶಿಸಿರಲಿಲ್ಲ. ನಾನು ಸ್ವತಃ ಹೇಳುತ್ತೇನೆ ಅದನ್ನು ಆ ನಂತರ ನೀಡಿದ್ದಾರೆ. ಸದರಿ ಲಿಖಿತ ಆದೇಶವನ್ನು ಎಸಿಬಿಯವರಿಗೆ ತದ ನಂತರ ನಾನು ತೋರಿಸಿದ್ದೇನೆ. ಆ ದಿನ ನಮಗೆ ಎಸಿಬಿ ಕಛೇರಿಯಲ್ಲಿ ಇನ್ಸ್ ಪೆಕ್ಟರ್ ಪ್ರಕಾಶ್ ಇವರು ಅಲ್ಲಿ ಇದ್ದಂತಹ ಸಿಬ್ಬಂದಿಗಳನ್ನು ಪರಿಚಯ ಮಾಡಿಕೊಟ್ಟು ಅದೇ ರೀತಿ ಭದ್ರಾ ಮೇಲ್ದಂಡೆ ಯೋಜನೆ ಕಛೇರಿಯ ಭೀಮಣ್ಣ ಹಾಗೂ ಚೌಧರಿ ಎಂಬುವವರನ್ನು ನನಗೆ ಪರಿಚಯ ಮಾಡಿಕೊಟ್ಟು ರೂ.**500**/– ಲಂಚಕ್ಕೆ ಸಂಬಂಧಿಸಿದಂತೆ ತಮಗೆ ದೂರು ನೀಡಲಾದ ಬಗ್ಗೆ ನಮಗೆ ತಿಳಿಸಿ ಪಂಚರಾಗುವಂತೆ ಸಹಕರಿಸಬೇಕು ಎಂದು ಕೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಅಲ್ಲದೇ ಆ ದಿನ ಸದರಿ ಇನ್ಸ್ ಪೆಕ್ಟರ್ ರವರು ಆ ಕುರಿತು ಧ್ವನಿ ಮುದ್ರಣವನ್ನು ನಮಗೆ ಕೇಳಿಸಿ ಅದನ್ನು ಡಿವಿಡಿಗೆ ಡೌನ್ ಲೋಡ್ ಮಾಡಿ ಪೆನ್ ಡ್ರೈವ್‌ಗೂ ಹಾಕಿ ಡಿವಿಡಿ ಹಾಗೂ ಪೆನ್ ಡ್ರೈವ್ ಇವುಗಳನ್ನು ಪ್ರತ್ಯೇಕವಾಗಿ ಸೀಲು ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಈಗ ನನಗೆ ತೋರಿಸಲಾದ ನಿಪಿ–**25** ನ್ನು ಭೀಮಣ್ಣ ತಾವೇ ಬರೆದಿರುವುದಾಗಿ ಷರಾ ಹಾಕಿಲ್ಲ. ನಿಪಿ–**25** ರಲ್ಲಿ ಮೊದಲನೇ ಬಾರಿಗೆ ಯಾವ ವೇಳೆಗೆ ಸಹಿ ಮಾಡಿದೆವು ಮತ್ತು **2** ನೇ ಬಾರಿಗೆ ಯಾವ ವೇಳೆಗೆ ಸಹಿ ಮಾಡಿದೆವು ಎಂದು ನಮೂದಿಸಿಲ್ಲ ಎಂದರೆ ನಿಪಿ–**25**(ಎ) ಸಹಿಯನ್ನು ನಾವು ಪಂಚನಾಮೆಗೆ ಹೊರಡುವ ಮೊದಲು ಮಾಡಲಾಗಿದ್ದು, **2** ನೇ ಬಾರಿ ನಾನು ಸಹಿಯನ್ನು ಚಳ್ಳಕೆರೆ ಟ್ರಾಪ್ ಮಹಜರ್ ಕಾಲಕ್ಕೆ ನೋಟಿನ ನಂಬರ್ ತಾಳೆ ಮಾಡುವ ಕಾಲಕ್ಕೆ ಮಾಡಿದ್ದೇನೆ.

**11**. ನಿಪಿ–**25** ರಲ್ಲಿ ಆ ರೂ.**500**/–ರ ನೋಟನ್ನು ಚೌಧರಿಯವರೇ ಹಾಜರುಪಡಿಸಿದ್ದಾಗಿ ನಮೂದಿಸಲಾಗಿಲ್ಲ. ಎಲ್ಲಾ ರೂ.**500** ರ ನೋಟುಗಳು ಸಾಮಾನ್ಯವಾಗಿ ಒಂದೇ ಆಕಾರ ಹಾಗೂ ಶೈಲಿಯವು ಇರುತ್ತವೆ ಎನ್ನುವುದು ನಿಜ. ಪ್ರತಿಯೊಂದು ನೋಟಿಗೂ ಅದರದೇ ಆದ ನಂಬರ್ ಇರುತ್ತದೆ ಎನ್ನುವುದು ನಿಜ. ನಿಪಿ–**25** ರ ಕೆಳಗಡೆ ಭಾಗದಲ್ಲಿ ಅ ನಂಬರಿನ ನೋಟನ್ನು ನಮೂದಿಸಿಲ್ಲ. ಆ ದಿನ ಚೌಧರಿ ತೆಗೆದುಕೊಂಡು ಬಂದಂತಹ ರೂ.**500** ರ ನೋಟಿಗೆ ಫಿನಾಪ್ತಲಿನ್ ಪೌಡರನ್ನು ಆ ನೋಟಿನ ಎರಡೂ ಬದಿಗೆ ಮಾರುತಿರಾಮ್ ಹಚ್ಚಿದ ಮತ್ತು ಆ ನೋಟನ್ನು ನಾನು ಮೊದಲೇ ನೋಡಿದ್ದೆ ಅದರ ಸಿರಿಯಲ್ ನಂಬರನ್ನು ಭೀಮಣ್ಣ ಹಾಳೆಯ ಮೇಲೆ ಬರೆದುಕೊಂಡಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು ಭೀಮಣ್ಣ ಅಲ್ಲದೇ ಪೊಲೀಸ್ ಇನ್ಸ್ ಪೆಕ್ಟರ್ ರವರು ಕೂಡಾ ನಿಪಿ–**25** ಕ್ಕೆ ಸಹಿ ಮಾಡಿದ್ದಾರೆ. ನಾನು ಹೇಳಿದಂತೆ ನಾವು ಹೋದಾಗ ನಿಪಿ–**25** ನ್ನು ತಯಾರಿಸಲಾಗಿಲ್ಲ ಬದಲಾಗಿ ಎಸಿಬಿ ಪೊಲೀಸರು ತಮಗೆ ಅನುಕೂಲಕ್ಕೆ ತಕ್ಕಂತೆ ತದ ನಂತರ ತಯಾರಿಸಿದ್ದು ನಾವು ಅದಕ್ಕೆ ಆ ನಂತರ ಸಹಿ ಮಾಡಿದ್ದೇವೆ ಎನ್ನುವುದು ಸರಿಯಲ್ಲ. ಆ ನೋಟನ್ನು ನಾನು ಗುರುತಿಸುವುದಾಗಿ ಮತ್ತು ಅದು ಮುದ್ದೆ ಮಾಲು **10** ಇರುತ್ತದೆ ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ಪೌಡರಿನ ಚೀಟಿಯನ್ನು ಕೂಡಾ ನಾನು ನೋಡಿ ಗುರುತಿಸುತ್ತೇನೆ ಎಂದು ಹೇಳಿ ಮುದ್ದೆ ಮಾಲು **3** ಸದರಿ ಪೌಡರ್ ಚೀಟಿ ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**12**. ಆ ದಿನ ಚೌಧರಿಯವರ ಜೇಬನ್ನು ನಾನು ಪರಿಶೀಲಿಸಿದಾಗ ಅವರ ಜೇಬಿನಲ್ಲಿ ಏನೂ ಇರಲಿಲ್ಲ. ಆ ದಿನ ಗುಲಾಬಿ ಬಣ್ಣಕ್ಕೆ ತಿರುಗಿದ ದ್ರಾವಣವನ್ನು ಒಂದು ಬಾಟಲಿಯಲ್ಲಿ ಹಾಕಿ ಮುದ್ದೆ ಮಾಲು **5** ರಂತೆ ಅದನ್ನು ಸೀಲು ಮಾಡಲಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಚೌಧರಿಯವರಿಗೆ ವಾಯ್ಸ್ ರೆಕಾರ್ಡರನ್ನು ಕೊಟ್ಟು ಅದನ್ನು ಯಾವಾಗ ಚಾಲೂ ಮಾಡಿಟ್ಟುಕೊಳ್ಳಬೇಕು ಮತ್ತು ನಾವುಗಳು ಗಮನದಲ್ಲಿಟ್ಟುಕೊಂಡು ಅವರು ಮಾತನಾಡುವುದನ್ನು ಕೇಳಿಸಿಕೊಳ್ಳಬೇಕು ಎಂದು ಎಸಿಬಿ ಪೊಲೀಸರು ಹೇಳಿಕೊಟ್ಟರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆ ದಿನ ಚೌಧರಿ ಬಿಳಿಯ ಬಣ್ಣದ ಆಫ್ ಶರ್ಟನ್ನು ಧರಿಸಿದ್ದರು. ಆ ಶರ್ಟಿನ ಬಗ್ಗೆ ಎಸಿಬಿ ಪೊಲೀಸರು ತನಿಖೆ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಆ ದಿನ ಎಸಿಬಿ ಕಛೇರಿಯಲ್ಲಿ ಪ್ರಾಯೋಗಿಕ ಪಂಚನಾಮೆಯನ್ನು ಮಾಡಲಾಯಿತು ಹಾಗೂ ಫೋಟೋಗಳನ್ನು ನಿಪಿ–**6** ರಿಂದ **12** ರಂತೆ ತೆಗೆಯಲಾಯಿತು ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ಆ ದಿನ ಆ ಬಗ್ಗೆ ನಿಪಿ–**2** ರಂತೆ ಮಹಜರ್ ಮಾಡಿ ನಮ್ಮ ಸಹಿ ಪಡೆಯಲಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**13**. ಆ ದಿನ ಚಳ್ಳಕೆರೆಗೆ ಜೀಪಿನಲ್ಲಿ ನಾನು, ಚೌಧರಿ, ಪೊಲೀಸ್ ಇನ್ಸ್ ಪೆಕ್ಟರ್, ಹರೀಶ್ ಹಾಗೂ ಮಾರುತಿರಾಮ್ ಹೋದೆವು. ನಮ್ಮ ಕಛೇರಿ ಬೆಳಗ್ಗೆ **10.00** ಕ್ಕೆ ಆರಂಭವಾಗಿ ಸಂಜೆ **5.30** ಕ್ಕೆ

ಮುಕ್ತಾಯವಾಗುತ್ತದೆ. ನಾವು ಆ ದಿನ ಭೂ ದಾಖಲೆಗಳ ಕಛೇರಿಗೆ ಹೋದಾಗ ಸದರಿ ಕಛೇರಿ ಓಪನ್ ಇತ್ತು ಅದರೆ ಸಾರ್ವಜನಿಕರು ಕಛೇರಿಯ ಒಳಗಡೆ ಇರಲಿಲ್ಲ. ಆ ಕಛೇರಿಯ ಅಕ್ಕಪಕ್ಕದಲ್ಲಿ ಬೇರೆ ಸಾರ್ವಜನಿಕ ಕಛೇರಿಗಳು ಇವೆ ಎನ್ನುವುದು ನಿಜ. ನಾವು ಜೀಪನ್ನು ಆ ದಿನ ಕೃಷ್ಣ ರಾಜೇಂದ್ರ ಲೈಬ್ರರಿ ಬಳಿ ನಿಲ್ಲಿಸಿದ್ದೆವು. ಆ ದಿನ ನಾನು ಜೀಪಿನಿಂದ ಇಳಿದ ನಂತರ ಚೌಧರಿಯವರಿಂದ **7–8** ಅಡಿಗಳ ದೂರದಲ್ಲಿ ಇದ್ದೆ. ಅಲ್ಲಿಗೆ ಹೋದ ನಂತರ ನಾನು ಕಛೇರಿಯ ಒಳಗೆ ಹೋಗಿ ಆ ಕಛೇರಿಯಲ್ಲಿ ಯಾರು ಯಾರು ಇದ್ದಾರೆ ಅಥವಾ ಇಲ್ಲ ಎಂಬ ಬಗ್ಗೆ ಖಚಿತಪಡಿಸಿಕೊಂಡಿಲ್ಲ. ಆರೋಪಿ ಆ ದಿನ ತಾಲ್ಲೂಕು ಕಛೇರಿ ಕಡೆಯಿಂದ ಬಂದ. ಆ ಘಟನೆಗೂ ಮೊದಲು ನಾನು ಆರೋಪಿತನನ್ನು ನೋಡಿರಲಿಲ್ಲ. ಆ ದಿನ ಆರೋಪಿ ಹಳದಿ ಬಣ್ಣದ ನೀಲಿ ಗೆರೆಯ ಶರ್ಟನ್ನು ಧರಿಸಿದ್ದ. ಚೌಧರಿ ಕಛೇರಿಯ ಒಳಗೆ ಹೋಗಿ ಬಂದ ನಂತರ ತಲೆ ಸವರುವ ಮೂಲಕ ಸೂಚನೆ ಕೊಟ್ಟರು. ಕಛೇರಿಯ ಒಳಗೆಡೆಯೇ ಎಸಿಬಿ ಪೊಲೀಸರು ಆರೋಪಿತನ ಕೈಗಳನ್ನು ಹಿಡಿದರು. ಆ ದಿನ ಆರೋಪಿ ಉತ್ತರಾಭಿಮುಖವಾಗಿ ಕುಳಿತುಕೊಂಡಿದ್ದ. ಆತ ಕುಳಿತುಕೊಂಡಂತಹ ಸ್ಥಳದ ಪೂರ್ವಕ್ಕೆ ಕಿಟಕಿ ಇತ್ತು. ಆರೋಪಿತನ ಚೆಂಬರಿನಲ್ಲಿಯೇ ಆತನ ಕೈಯನ್ನು ದ್ರಾವಣದಲ್ಲಿ ತೊಳೆಸಲಾಯಿತು. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಆ ದಿನ ನಾನು ಮತ್ತು ಚೌಧರಿ ಭೂ ಕಂದಾಯ ಇಲಾಖೆಗೆ ಹೋಗಿಲ್ಲ ಮತ್ತು ಚೌಧರಿ ಆರೋಪಿತನಿಗೆ ಫೋನ್ ಮಾಡಿಲ್ಲ ಹಾಗೂ ಇಲ್ಲಿಯೇ ಇದ್ದೇನೆ ಎಂದು ಹೇಳುತ್ತಾ ಆರೋಪಿ ಅಲ್ಲಿಗೆ ಬಂದಿಲ್ಲ ಹಾಗೂ ಚೌಧರಿ ರೂ.**500** ನ್ನು ತಮ್ಮ ಜೇಬಿನಿಂದ ತೆಗೆದು ಆರೋಪಿತನ ಕೈಗೆ ಕೊಟ್ಟಿಲ್ಲ ಹಾಗೂ ಆರೋಪಿ ಅದನ್ನು ತನ್ನ ಶರ್ಟಿನ ಜೇಬಿನಲ್ಲಿ ಇಟ್ಟುಕೊಂಡಿಲ್ಲ ಎನ್ನುವುದು ಸರಿಯಲ್ಲ. ಆ ದಿನ ಆರೋಪಿ ಎಸಿಬಿ ಪೊಲೀಸರು ಆತನ ಕಛೇರಿ ಒಳಗೆ ಬಂದ ತಕ್ಷಣ ರೂ.**500** ರ ನೋಟನ್ನು ಕಿಟಕಿಯಿಂದ ಬಿಸಾಕಲು ಹೋದ ಆಗ ಅವರು ಅವನ ಎರಡೂ ಕೈಗಳನ್ನು ಹಿಡಿದು ಅವರ ಜೊತೆ ಸಹಕರಿಸಬೇಕೆಂದು ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಂತರ ಆರೋಪಿತನ ಕೈಗಳನ್ನು ತೊಳೆಸಿದಾಗ ದ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆ ದಿನ ಅರೋಪಿ ತನ್ನ ಶರ್ಟಿನ ಜೇಬಿನಿಂದ ರೂ.**500/–**ನ್ನು ತೆಗೆದು ಹಾಜರುಪಡಿಸಿದ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆ ದಿನ ಆ ಸ್ಥಳದಲ್ಲಿ ಆ ರೂ.**500/–** ನೋಟಿನ ನಂಬರನ್ನು ನಾವು ತಾಳೆ ಹಾಕಿ ನೋಡಿದೆವು ಮತ್ತು ಆ ನಂಬರುಗಳು ಸರಿ ಇದ್ದವು ಹಾಗೂ ಆ ನೋಟನ್ನು ಒಂದು ಲಕೋಟೆಯಲ್ಲಿ ಹಾಕಿ ಸೀಲು ಮಾಡಲಾಯಿತು ಹಾಗೂ ನಿಪಿ–**25** ರ ಮೇಲೆ ಷರಾ ಕೂಡಾ ಹಾಕಲಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಅ ದಿನ ಆರೋಪಿತನಿಗೆ ಬೇರೆ ಶರ್ಟನ್ನು ಕೊಟ್ಟು ಆತನ ಶರ್ಟನ್ನು ದ್ರಾವಣದಲ್ಲಿ ಅದ್ದಿದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ಬಂತು ಮತ್ತು ಆ ದ್ರಾವಣವನ್ನು ಇನ್ನೊಂದು ಬಾಟಲಿಯಲ್ಲಿ ಹಾಕಿ ಮುದ್ದೆ ಮಾಲು **7** ರಂತೆ ಸೀಲು ಮಾಡಲಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿ ಯಾವುದೇ ಸ್ವ–ಇಚ್ಛಾ ಹೇಳಿಕೆಯನ್ನು ನಿಪಿ–**26** ರಂತೆ ಬರೆದುಕೊಟ್ಟಿಲ್ಲ ಮತ್ತು ಆತನಿಂದ ಒತ್ತಾಯಪೂರ್ವಕವಾಗಿ ಪೊಲೀಸರು ಅದನ್ನು ಬರೆಸಿಕೊಂಡರು ಎನ್ನುವುದು ಸರಿಯಲ್ಲ. ನಿಪಿ–**13** ವಾಯ್ಸ್ ರೆಕಾರ್ಡರಿನಲ್ಲಿ ದಾಖಲಿಸಿಕೊಳ್ಳಲಾದ ಸಂಭಾಷಣೆಯ ಲೇಖಿ ಪ್ರತಿ ಇರುತ್ತದೆ. ನಿಪಿ–**13** ರಲ್ಲಿ ಆರೋಪಿ

ರೂ.**500/–** ಲಂಚ ಕೇಳಿದ್ದರ ಬಗ್ಗೆ ಯಾವುದೇ ಲಿಖಿತ ಸಂಭಾಷಣೆ ಇರುವುದಿಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.